ಇವತ್ತು ಏನೇ ಮಾಡಿದ್ದರೂ ಹೈಕೋರ್ಟ್ ಡೈರೆಕ್ಷನ್ ಪ್ರಕಾರ ಮಾಡಿರತಕ್ಕದ್ದು ಎಂದು ತಿಳಿಸಿ, 5490-94ನೆಯ ರಿಟ್‌ಗಳನ್ನು ಆಧರಿಸಿದ್ದಾರೆ.

ದಿನಾಂಕ : 9-9-91 ರಂದು, ಮಾನ್ಯ ಮುಖ್ಯ ಮಂತ್ರಿಗಳು, ಈ ಮೇಲಿನ ತಮ್ಮ ಹೇಳಿಕೆಯನ್ನು ಸರಿಪಡಿಸಿ ಈ ಕೆಳಕಂಡಂತೆ ತಿಳಿಸಿರುತ್ತಾರೆ.

The Government Vide its order No. HUD 411 MNS 88, dated 27.12.1990 have not denotified or reconveyed the land in question in favour of M/s. Mohan Meakins and Mysore Food Products Ltd., on the other hand the Government have merely held that the entire scheme and subsequent land.....

proceedings of the B.D.A. are illegal and void. The allottees of sites have filed the Writ Petition No. 5490 to 5494 of 91 on 1.3.1991 in the Karnataka High Court, Karnataka High Court has admitted this Writ Petitions but has declined to give the stay order as prayed for by the allottee of the site. Thus, it was *prima facie* clear that the High Court was convinced about the mertis of the case".

He further clarified " that he referred to this preliminary decision of the High Court and that the High Court had not given any direction to the Government".

ತಮ್ಮ ಹೇಳಿಕೆ, ನ್ಯಾಯಾಲಯದ ಆರಂಭಿಕ ನಿರ್ಣಯವನ್ನು ಆಧರಿಸಿದೆ ಎಂದು ವಿವರಣೆಯನ್ನು ಸಭೆಗೆ ನೀಡುರುವುದರಿಂದ, ಸಭೆಯನ್ನು ತಪ್ಪುದಾರಿಗೆ ಎಳೆಯುವುದಾಗಲಿ, ಅಥವಾ ತಿಳಿದೂ, ಉದ್ದೇಶಪೂರ್ವಕವಾದ ತಪ್ಪು ಹೇಳಿಕೆ ಮಾಡಿದ್ದಾರೆಂದು ತೀರ್ಮಾನಿಸುವಂತಿಲ್ಲ, ತದನಂತರ, ನಮ್ಮ ಪತ್ರಕ್ಕೆ ಉತ್ತರವಾಗಿ ಅವರು ದಿನಾಂಕ 9-9-91ರ ನನ್ನ ಹೇಳಿಕೆ ಸತ್ಯವಾಗಿರುತ್ತದೆ, ಅದನ್ನೇ ನಾನು ಪುನರ್‌ಉಚ್ಚರಿಸುತ್ತಾ ಧೃಡೀಕರಿಸುತ್ತೇನೆ ಎಂದು ತಿಳಿಸಿರುತ್ತಾರೆ. ಆದಕಾರಣ ಮಾನ್ಯ ಸದಸ್ಯರಾದ ಶ್ರೀ ಬಿ. ಎಸ್. ಯಡಿಯೂರಪ್ಪನವರು ಭಾವಿಸಿದಂತೆ, ಈ ವಿಷಯ ಹಕ್ಕು ಬಾಧ್ಯತಾ ಸೂಚನೆಯ ಪರಿಮಿತಿಗೆ ಒಳಪಡುವುದಿಲ್ಲ, ಪ್ರಯುಕ್ತ, ಸದರಿ ಸೂಚನೆಗೆ ನಾನು ಅಸಮ್ಮತಿಸಿದ್ದೇನೆ.

ನಿಲುವಳಿ ಸೂಚನೆ

(ಅನುಮತಿ ಕೋರಿ ಚರ್ಚೆ)

ಹಾಲು ಉತ್ಪಾದಕರು ಉಪಯೋಗ ಮಾಡುವ ಪದಾರ್ಥಗಳ ಬೆಲೆ ಜಾಸ್ತಿಯಾಗಿರುವುದು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಹಾಲು ಉತ್ಪಾದಕರಿಗೆ ಬಹಳ ಭೀಕರವಾದ ಪರಿಸ್ಥಿತಿ ಬಂದಿದೆ. ಈಗ, ಕಳೆದ 5-6 ತಿಂಗಳುಗಳಿಂದ ಪ್ರತಿಯೊಂದರ ಬೆಲೆ ಜಾಸ್ತಿಯಾಗಿದೆ. ಸೀಮೆ ಗೊಬ್ಬರದ ಬೆಲೆ ಶೇಕಡ 30 ರಷ್ಟು ಹೆಚ್ಚಾಗಿದೆ. ಬರೀ ಸೀಮೆ ಗೊಬ್ಬರವಲ್ಲದೆ ವ್ಯವಸಾಯರಂಗದಲ್ಲಿ ಉಪಯೋಗಿಸತಕ್ಕಂಥ ಎಲ್ಲಾ ಪದಾರ್ಥಗಳು, ಎಲ್ಲಾ ವಸ್ತುಗಳ ಬೆಲೆಯೂ ಕೂಡಾ

ಇವತ್ತು ಜಾಸ್ತಿಯಾಗಿದೆ. ಅದರಲ್ಲೂ ಹಾಲು ಉತ್ಪಾದಕರು ಉಪಯೋಗಿಸುತ್ತಿರುವ ಇಂಡಿಯಾಗಲೀ, ಬೂಸ ಆಗಲಿ, ಔಷಧ ಆಗಲೀ ಅವುಗಳ ಬೆಲೆಗಳು ನೂರಕ್ಕೆ ನೂರರಷ್ಟು ಜಾಸ್ತಿಯಾಗಿದೆ. ಈ ಕಾರಣದಿಂದ ಇವತ್ತು ಏನಾಗಿದೆ ಎಂದರೆ, ಅನೇಕರು ಹಸುಗಳನ್ನು ಸಿಕ್ಕಾಪಟ್ಟೆ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ.

ಈ ರೀತಿ ಮಾರಾಟ ಆಗುತ್ತಾ ಇರುವ ಕಾರಣದಿಂದ ರಾಜ್ಯದಲ್ಲಿ ಕೆಲವು ಕಡೆ ಹಾಲಿನ ಬೆಲೆ 10 ರಿಂದ 15 ರೂಪಾಯಿ ಒಂದು ಲೀಟರ್‌ಗೆ ಆಗಿದೆ. ಪತ್ರಿಕೆಗಳಲ್ಲಿ ವರದಿ ಆಗಿರತಕ್ಕದ್ದು ಇದು. ಇನ್ನೂ ಕೆಲವು ಕಡೆ 50ರೂಪಾಯಿನಿಂದ 60 ರೂಪಾಯಿವರೆಗೆ ಒಂದು ಲೀಟರ್ ಹಾಲು ಈಗ ಮಾರಾಟ ಆಗುತ್ತಾ ಇದೆ ಎಂಬ ಸುದ್ದಿ ಕೇಳಿಬಂದಿದೆ. ಅದು ನಿಜವೋ ಅಥವಾ ನಿಜವಲ್ಲವೊ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಪರಿಸ್ಥಿತಿ ಏನು ಆಗಿದೆ? ಬಯಲು ಸೀಮೆಯ ಭಾಗದಲ್ಲಿರತಕ್ಕ 5-6 ಜಿಲ್ಲೆಗಳಲ್ಲಿ ಕೋಲಾರ, ಬೆಂಗಳೂರು, ತುಮಕೂರು, ಮಂಡ್ಯ ಇತ್ಯಾದಿ ಜಿಲ್ಲೆಗಳಲ್ಲಿ ರೈತರ ಅತಿ ಮುಖ್ಯವಾದ ಕಸಬು ಅಂದರೆ ರೇಷ್ಮೆ ಮತ್ತು ಹಾಲು. ರೇಷ್ಮೆ ವಿಚಾರ ಈಗ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಹಾಲಿನ ವಿಚಾರ ಮಾತನಾಡುತ್ತಿದ್ದೇನೆ. ಹಾಲಿನ ಬೆಲೆ ಏರಿಕೆ ಮಾಡುತ್ತಾ ಇರುವುದರಿಂದ ಅದರಲ್ಲಿ ಕೆಎಂಎಫ್ ಇದೆ. ಕೆಎಂಎಫ್ ಹಾಲಿನ ಬೆಲೆ ರೈಸ್ ಮಾಡಬೇಕಾಗಿದ್ದರೆ ಸರ್ಕಾರ ಕೂಡ ಅದಕ್ಕೆ ಒಪ್ಪಿಗೆ ಕೊಡಬೇಕಾಗುತ್ತದೆ. ಇದು ಆಗದೇ ಇರುವ ಕಾರಣದಿಂದ ಇವತ್ತು ರೈತರು ಹಸುಗಳನ್ನು ಮಾರಾಟ ಮಾಡುತ್ತಿದ್ದಾರೆ. ಹಾಲು ಕರೆಯತಕ್ಕಂಥ ಹಸುಗಳನ್ನು ಕಸಾಯಿಖಾನೆಗೆ ಹೋಗತಕ್ಕ ದೃಶ್ಯವನ್ನು ನಾವು ಕಾಣಿತ್ತಿದ್ದೇವೆ. ಇದರಿಂದಾಗಿ ಮೊದಲು ಒಂದು ಸಾರಿ ಹಾಲಿನ ಬೆಲೆಯನ್ನು ಜಾಸ್ತಿ ಮಾಡಬೇಕು ಎಂದು ಮನವಿಯನ್ನು ಸರ್ಕಾರಕ್ಕೆ ಮಾಡಿದ್ದೆ. ಆದರೆ ಆವತ್ತಿನ ದಿವಸ ಸರಿಯಾದಂತಹ ಪ್ರತಿಕ್ರಿಯೆ ಸರ್ಕಾರದಿಂದ ಬರಲಿಲ್ಲ. ಆದ್ದರಿಂದ ಇವತ್ತು ಹಾಲಿನ ಬೆಲೆಯನ್ನು ಉತ್ಪಾದಕರಿಗೆ ಹೆಚ್ಚು ಮಾಡಬೇಕಾಗಿರತಕ್ಕದ್ದು ಅತೀ ಜರೂರು ಮತ್ತು ಅವಶ್ಯಕತೆ ಇದೆ. ಆದ್ದರಿಂದ ಕಸಾಯಿಖಾನೆಗೆ ಹಸುಗಳು ಮಾರಾಟ ಆಗತಕ್ಕದ್ದನ್ನು ತಪ್ಪಿಸಬೇಕು. ಅದು ಹಾಲು ಕರೆಯತಕ್ಕ ಹಸುಗಳು ಕಸಾಯಿಖಾನೆಗೆ ಸೇರುತ್ತಿದೆ ಮತ್ತು ರೇಟ್‌ನಲ್ಲಿ ಕೂಡ ವ್ಯತ್ಯಾಸ ಇದೆ. ಕೆಲವು ಕಡೆ 10ರಿಂದ 15 ರೂಪಾಯಿವರೆಗೆ ಹಾಲು ಲೀಟರ್ ಹಾಲು ಮಾರಾಟ ಆಗುತ್ತಿದೆ. ಇದು ಬಹಳ ತೀವ್ರತರವಾದ ಪರಿಸ್ಥಿತಿ ಇದೆ. ಅದರಲ್ಲಿ ಅನೇಕ ಹಾಲಿನ ಉತ್ಪಾದಕರು ಜಮೀನು ಇಲ್ಲದೇ ಇರತಕ್ಕವರು ಇದ್ದಾರೆ. ವ್ಯವಸಾಯ ಮಾಡತಕ್ಕ ಕೂಲಿಕಾರರು ಕೂಡ ಇದ್ದಾರೆ. ಇದರ ಎಲ್ಲಾ ಅಂಕಿಅಂಶಗಳು ನನ್ನಲ್ಲಿವೆ. ಈ ಸಭೆಗೆ ಎಲ್ಲವನ್ನೂ ನಾನು ಮನವರಿಕೆ ಮಾಡಿಕೊಡಬೇಕು. ಇದನ್ನು ಚರ್ಚೆ ಮಾಡಬೇಕಾದ ಅವಶ್ಯಕತೆ ಇದೆ. ಆದ್ದರಿಂದ ದಯಮಾಡಿ ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಬೈರೇಗೌಡರು ಅಜರ್ನ್‌ಮೆಂಟ್ ಮೋಷನ್ ಮೂವ್ ಏನು ಮಾಡಿದ್ದಾರೆ, ಅದಕ್ಕೆ ಸಪೋರ್ಟ್‌ಮಾಡದೇ ಹಾಲಿನ ಬೆಲೆ ಹೆಚ್ಚು ಆಗಬೇಕು ಎಂದು ಹೇಳುವುದು ನನ್ನ ಕರ್ತವ್ಯವಾಗಿದೆ. ಬೆಂಗಳೂರು ಮತ್ತು ಕೋಲಾರ ಜಿಲ್ಲೆ ಮುಖ್ಯವಾಗಿ ಈ ಎರಡು ಜಿಲ್ಲೆಗಳಿಂದ ಸುಮಾರು ಆರು ಲಕ್ಷ ಲೀಟರ್ ಹಾಲು ಬೆಂಗಳೂರಿಗೆ ಬರುತ್ತಿದೆ. ಬಹುಶ: ನನಗಾದರೂ ಅನಿಸುತ್ತದೆ; ಈ ಆರು ಲಕ್ಷ ಲೀಟರ್

ಹಾಲು ಒಂದೆರಡು ದಿವಸ ಇಲ್ಲಿಗೆ ಬರುವುದನ್ನು ನಿಲ್ಲಿಸಿದರೆ ಆಗ ರೈತರ ಕಷ್ಟ ಏನು ಇದೆ ಎಂದು ನಮಗೆ ಅರ್ಥ ಆಗುತ್ತದೆ. ಅಧಿಕಾರಿಗಳಿಗೆ ಆರು ತಿಂಗಳಿಗೆ ಒಮ್ಮೆ ಸಂಬಳ ಜಾಸ್ತಿ ಮಾಡುತ್ತೀರಿ. ಅಥವಾ ಬೋನಸ್ ಜಾಸ್ತಿ ಮಾಡುತ್ತೀರಿ. ಆದರೆ ರೈತರಿಗೆ ಹಾಲಿನ ಬೆಲೆ ಜಾಸ್ತಿ ಮಾಡಿಲ್ಲ. ಹೋದ ವಿಧಾನಸಭೆಯ ಅಧಿವೇಶನದಲ್ಲಿ ಹಾಲಿನ ಬೆಲೆ ಹೆಚ್ಚು ಮಾಡಬೇಕೆಂದು ಹೇಳಿದ್ದೆವು. ಮಾನ್ಯ ಬಸವಲಿಂಗಪ್ಪನವರು ಹಾಲಿನ ಬೆಲೆಯನ್ನು ಹೆಚ್ಚು ಮಾಡುತ್ತೇನೆ ಎಂದು ಪ್ರಾಮಿಸ್ ಮಾಡಿದ್ದರು. ರೈತರ ಕಷ್ಟ ಸುಖ ನಮಗೆ ಗೊತ್ತಿದೆ ಎಂದರು. ಬಸವಲಿಂಗಪ್ಪನವರು ಹೋದರು, ಮಾನ್ಯ ಪಾಟೀಲರು ಬಂದರು. ಯಾರಾದರೂ ಬರಲಿ, ಅದು ಬೇರೆ ವಿಷಯ. ಅದಕ್ಕೋಸ್ಕರವಾಗಿ ನನ್ನ ಅಭಿಪ್ರಾಯದಲ್ಲಿ ನಾನು ಅಜರ್ನಮೆಂಟ್ ಮೋಷನ್‌ಗೆ ನಾನು ಸಪೋರ್ಟ್ ಮಾಡದೇ ಈ ಹಾಲಿನ ಬೆಲೆ ಹೆಚ್ಚು ಆಗಬೇಕು ಎನ್ನುವವರಲ್ಲಿ ನಾನು ಒಬ್ಬ. ದಯಮಾಡಿ ಸರ್ಕಾರದವರು ಇದರ ಬಗ್ಗೆ ಸೂಕ್ತ ಗಮನ ಕೊಟ್ಟು ಆದಷ್ಟು ಬೇಗನೇ ಹಾಲಿನ ಬೆಲೆ ಹೆಚ್ಚಿಸಬೇಕೆಂದು ನಾನು ಕೋರುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಗಮನಕ್ಕೆ ಮಾನ್ಯ ಬೈರೇಗೌಡರು ಏನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ನಾನೂ ಸಹ ಕೆಲವು ವಿಚಾರಗಳನ್ನು ಅವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಒಂದು ಹಸು, ಎರಡು ಹಸು ಸಾಕಿಕೊಂಡಿರತಕ್ಕ ಬೆಂಗಳೂರು ಜಿಲ್ಲೆಯ ಜನರಿಗೆ ಬಹಳ ಕಷ್ಟ ಆಗಿದೆ. ಹುಲ್ಲಿನ ಬೆಲೆ ವಿಪರೀತ ಹೆಚ್ಚು ಆಗಿದೆ. ಮತ್ತು ದನಕರುಗಳಿಗೆ ಉಪಯೋಗಿಸತಕ್ಕ ಹಿಂಡಿಗಳ ಬೆಲೆ ಏನು ಇದೆ, ಅದು ಕಳೆದ ಎರಡು ವರ್ಷದಲ್ಲಿ ಒಂದಕ್ಕೆ ಎರಡರಷ್ಟು ಆಗಿದೆ. ಈಗ ಒಂದು ಹಸು ಎರಡು ಹಸು, ಮೂರು ಹಸು ಸಾಕಿಕೊಂಡಿರುವವರಿಗೆ ಒಂದು ಹಸುವಿಗೆ 200-300 ರೂ. ಗಳು ಸಹ ಸಿಗುವುದಿಲ್ಲ. ಬ್ಯಾಂಕಿನಿಂದ ಸಾಲಗಳನ್ನು ತೆಗೆದುಕೊಂಡು ಆ ಸಾಲವನ್ನು ವಾಪಸ್ಸು ಮಾಡದೇ ಇರತಕ್ಕ ಸ್ಥಿತಿಯಲ್ಲಿ ರೈತರು ಇದ್ದಾರೆ. ಹೆಣ್ಣು ಕರು ಹಾಕಿದರೆ ಪರವಾಗಿಲ್ಲ; ಅದರ ಆಸೆಲು ಬರುತ್ತದೆ. ಹೋರಿ ಕರ ಹಾಕಿದರೆ ಬಹಳ ಕಷ್ಟ ಆಗುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಬಹಳ ಮುಖ್ಯವಾಗಿ ನಾವು ಎಲ್ಲಾ ಹಳ್ಳಿಗಳಲ್ಲಿಯೂ ಸಹ ಬ್ಯಾಂಕಿನಿಂದ ಸಾಲವನ್ನು ತೆಗೆದುಕೊಂಡು ಒಂದು ಹಸು, ಎರಡು ಹಸು, ಮೂರು ಹಸುವನ್ನು ತೆಗೆದುಕೊಂಡಿದ್ದೇವೆ. ಈಗ ಏನು ಆಗಿದೆ ಎಂದರೆ ಟ್ರಾನ್ಸ್‌ಪೋರ್ಟೇಷನ್ ಕಾಸ್ಟ್ ಜಾಸ್ತಿ ಇದೆ. ನಮಗೆ ಹಾಲಿನ ಬೆಲೆಯನ್ನು ಜಾಸ್ತಿ ಮಾಡಿಲ್ಲ. ಇದರಿಂದ ಈಗ ಹಸುವಿಗೆ ಹಸಿರು ಹುಲ್ಲು ಸಹ ಸಿಗುವುದಿಲ್ಲ. ವರ್ಷದಲ್ಲಿ 2-3,4 ತಿಂಗಳು ಸಿಕ್ಕಿದರೆ ಹೆಚ್ಚು. ಅದರ ಮೇಲೆ ಸಿಗುವುದಿಲ್ಲ, ಈಗ ಮಳೆ ಸ್ವಲ್ಪ ಜಾಸ್ತಿ ಆಗಿದೆ ; ಈಗ ಇನ್ನೊಂದು ಎರಡು ಅಥವಾ ಮೂರು ತಿಂಗಳು ಪರವಾಗಿಲ್ಲ. ಆಮೇಲೆ ಬಹಳ ಕಷ್ಟ ಆಗುತ್ತದೆ. ಇವತ್ತು ಅಧಿವೇಶನ ಮುಕ್ತಾಯವಾಗುತ್ತಿದೆ. ಆದ್ದರಿಂದ ನಾನು ಸರ್ಕಾರವನ್ನು ಒತ್ತಾಯ ಮಾಡುವುದು ಏನೆಂದರೆ, ರೈತರಿಗೆ ಸ್ವಲ್ಪವಾದರೂ ರಿಲೀಫ್ ಕೊಡಬೇಕು. ಮತ್ತು ಸ್ವಲ್ಪ ಹಾಲಿನ ಬೆಲೆ ಜಾಸ್ತಿ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ರೈತರಿಗೆ ಕೊಡತಕ್ಕ ಹಾಲಿನ ಬೆಲೆ ಬಹಳ ಕಡಿಮೆ ಆಯಿತು. ಮಹಾರಾಷ್ಟ್ರದಲ್ಲಿ ವೆಸ್ಟ್-ಬೆಂಗಾಲ್‌ನಲ್ಲಿ ಉತ್ತರಪ್ರದೇಶದಲ್ಲಿ ಕೊಡುತ್ತಾ ಇರತಕ್ಕ ಹಾಲಿನ ರೇಟಿಗೂ ನಮ್ಮ ಕರ್ನಾಟಕ ರಾಜ್ಯಕ್ಕೂ ಒಂದರಿಂದ ಎರಡು ರೂಪಾಯಿ

ಜಾಸ್ತಿ ಒಂದು ಲೀಟರ್‌ಗೆ ಇದೆ. ಈ ರೈತರಿಗೆ ನ್ಯಾಯವಾಗಿ ಬರಬೇಕಾದ್ದನ್ನು ಕೇಳಿದರೆ ಏನೇನೋ ಸಬೂಬು ಸರ್ಕಾರ ಹೇಳುತ್ತದೆ. ರೈತರು ಆಹಾರ ಧಾನ್ಯ ಬೆಳೆಯಬೇಕು. ನಂತರ ಅದನ್ನು ಈ ದೇಶಕ್ಕೋಸ್ಕರ ಲೆವಿನಲ್ಲಿ ಕೊಡಬೇಕು. ಹಾಗೆಯೇ ರೈತರು ಕೊಂಡುಕೊಳ್ಳತಕ್ಕ ಬೇರೆ ಪದಾರ್ಥಗಳ ಬೆಲೆ ದಿನನಿತ್ಯ ಹೆಚ್ಚುತ್ತಿದೆ. ಅವರ ಕಷ್ಟವನ್ನು ಯಾರೂ ಕೇಳುವವರಿಲ್ಲ, ಅವರೂ ಇತರರ ಹಾಗೆ ಬಾಳಿ ಬದುಕುವುದು ಬೇಡವೇ? ಅವರ ಮಕ್ಕಳು ನಾಲ್ಕು ದಿವಸ ಒಳ್ಳೆಯ ಬಟ್ಟೆ ಹಾಕಿಕೊಂಡು ತಿರುಗಾಡುವುದು ಬೇಡವೇ? ರೈತರು ಎಂತಹ ಹೀನೀಯವಾದ ಸ್ಥಿತಿಯಲ್ಲಿದ್ದಾರೆ ಎಂದರೆ ಅದನ್ನು ಹೇಳುವುದಕ್ಕೆ ಮನಸ್ಸಿಗೆ ಬಹಳ ನೋವಾಗುತ್ತದೆ.

ಈ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಕೂಲಿ ಸಿಕ್ಕುವುದಿಲ್ಲ, ಅಲ್ಲಿನ ಎಷ್ಟೋ ಜನರು, ವಿಧವೆಯರು, ಅಸಹಾಯಕರು, ಜಮೀನು ಇಲ್ಲದಿರತಕ್ಕಂಥವರು ಕಾರ್ಮಿಕರು, 500, 1000, 2000 ರೂಪಾಯಿಗಳನ್ನು ಕೊಟ್ಟು ಒಂದು ಹಸು, ಎಮ್ಮೆ ತೆಗೆದುಕೊಂಡು ಜೀವನ ಮಾಡುತ್ತಾ ಇದ್ದರು. ಅಂಥವರು ಈಗಿನ ರೇಟ್‌ನಲ್ಲಿ ಹೇಗೆ ಜೀವನ ಮಾಡಬಹದು ಎಂಬುದನ್ನು ತಾವುಗಳು ವಿಚಾರ ಮಾಡಬೇಕು. ಅಧಿಕಾರಿಗಳಿಗೆ ಏನೋ ಒಂದು ಇಂಡೆಕ್ಸ್ ಪದ್ಧತಿ ಇದೆಯಂತೆ; ಅದು ಏರಿದ ತತ್‌ಕ್ಷಣವೆ ಒಂದು ಡಿ. ಎ. ಕೊಡುತ್ತಾರೆ ಎಂದು ಹೇಳುತ್ತಾರೆ. ಇದನ್ನು 3 ತಿಂಗಳಿಗೊಮ್ಮೆ ಆರು -ತಿಂಗಳಿಗೊಮ್ಮೆ ಕೊಡುತ್ತಾರಂತೆ. ಅವರಿಗೆ ಕೊಡುವುದು ಬೇಡ ಎಂದು ನಾನೇನೂ ಹೇಳುವುದಿಲ್ಲ, ಆದರೆ ನಾವೇನು ಪಾಪ ಮಾಡಿದ್ದೇವೆ? ಅಧಿಕಾರಿಗಳಿಗೆ ಸಂಬಳ ಜಾಸ್ತಿ ಆಗುತ್ತದೆ? ನಮಗೆ ಯಾರು ಜಾಸ್ತಿ ಕೊಡುತ್ತಾರೆ? ನಮ್ಮ ಹೊಲ, ಮನೆಗಳನ್ನು ಹರಾಜು ಹಾಕಿದರೆ ಇದ್ದುದೆಲ್ಲವನ್ನೂ ಕೊಟ್ಟು ಹರಾಜು ಆಗಿಹೋದರೂ ಕೂಡ ನಮ್ಮ ಬಗ್ಗೆ ಏನೂ ಇಲ್ಲ, ನಮಗೆ ಹೇಳುವವರು, ಕೇಳುವವರು ಯಾರೂ ಇಲ್ಲ.

ಅದೇ ಅಧಿಕಾರಿಗಳಿಗಾದರೆ 8 ಸಾವಿರ, 10 ಸಾವಿರ ಸಂಬಳ ಕೊಡುತ್ತಾರೆ, ಹೆಚ್ಚು ಮಾಡುತ್ತಲೇ ಇರುತ್ತಾರೆ, ಅವರಿಗೆ ಕೊಡಿ, ಬೇಡ ಎಂದು ನಾನು ಹೇಳುವುದಿಲ್ಲ, ಆದರೆ ಅವರಿಗೆ ಏನು ಅನುಕೂಲ ಇದೆಯೋ ಅದರಲ್ಲಿ ಸ್ವಲ್ಪವಾದರೂ ಬೇಡ ನಮಗೆ ಬೇಡ ಎಂದರೆ ಹೇಗೆ? ನಮ್ಮನ್ನು ಕೇಳುವವರು ಯಾರೂ ಇಲ್ಲವೆ?

ಅಧ್ಯಕ್ಷರು : ನೀವು ಅಧಿಕಾರಿಗಳಿಗೆ ಕೊಡಬೇಡಿ ಎಂದು ಹೇಳಿ? ಅದರಲ್ಲಿ ಏನು ತಪ್ಪು ಇದೆ? ಅವರ ದಾಕ್ಷಿಣ್ಯ ನಿಮಗೇಕೆ ಬೇಕು? ಖಡಾಖಂಡಿತವಾಗಿ ಕೊಡಬೇಡಿ ಎಂದು ಹೇಳಿಬಿಡಿ.

ಶ್ರೀ ಕೆ.ಹೆಚ್. ಹನುಮೇಗೌಡ : ಬಹುಶ: ಒಂದೂವರೆ ಪರ್‌ಸೆಂಟ್‌ನಷ್ಟು ಜನರು ಅವರು ಇರಬಹುದು. ಅವರಿಗೆ ಈ ದೇಶದಲ್ಲಿ ಉತ್ಪಾದನೆಯಾಗತಕ್ಕಂಥ ಒಟ್ಟು ಹಣದಲ್ಲಿ ಅರ್ಧಭಾಗದಷ್ಟು ವಿನಿಯೋಗವಾಗುತ್ತದೆ. ಅದರ ಬಗ್ಗೆ ಯಾರೂ ಕೇಳುವುದಿಲ್ಲ, ಅಧಿಕಾರಿಗಳು ತಮಗೆ ಬೇಕಾದ ಹಾಗೆ ಬರೆದುಕೊಡುತ್ತಾರೆ; ನಮ್ಮ ಮಂತ್ರಿಯವರು ಕೂಡ ಅದಕ್ಕೆ ಸಹಿ ಹಾಕುತ್ತಾರೆ - ಎಂದು ಕಾಣುತ್ತದೆ. ಪರಿಸ್ಥಿತಿಯು ಹೀಗೆ ಇರುವಾಗ ನಾವೇನು ಪಾಪ ಮಾಡಿದ್ದೇವೆ? ನಾನು ಈ ಬಗ್ಗೆ ಮಾತನಾಡಿದಾಗ ಮೊನ್ನೆಯ ದಿವಸ, ಮಾನ್ಯ ಖರ್ಗೆಯವರು ನಾನು ವೈಯಕ್ತಿಕವಾಗಿ ಮಾತನಾಡಿದ್ದೇನೆ ಎಂದು ತಪ್ಪು ತಿಳಿದುಕೊಂಡಿದ್ದರು. ನಾನು ಅವರ ಬಗ್ಗೆ ವೈಯಕ್ತಿಕವಾಗಿ ಮಾತನಾಡಿಲ್ಲ, ಜನರು ಕಷ್ಟದಲ್ಲಿದ್ದಾರೆ. ಆ ಜನರ ಕಷ್ಟನಷ್ಟ,

ನೋವುಗಳನ್ನು ನಾನು ಕಣ್ಣಾರೆ ಕಂಡವನಾಗಿರುವುದರಿಂದ ನಾನು ನೊಂದು ಆ ಮಾತುಗಳನ್ನು ಆಡಿದ್ದೇನೆ. ನಾವಾದರೂ ಎಲ್ಲಿಯವರೆಗೆ ನೀವುಗಳು ಹೇಳಿದ್ದನ್ನು ಕೇಳುತ್ತಾ ಕುಳಿತಿರುವುದು? ನಾವು ಇಲ್ಲಿ 80 ಜನರು ಇದ್ದರೂ ಕೂಡ, ರೈತರ ಸರ್ವನಾಶವಾಗುತ್ತಿದ್ದರೆ, ನಾವಾದರೂ ಇನ್ನೇನು ಮಾತನಾಡದೇ ಸುಮ್ಮನೇ ಕುಳಿತುಕೊಳ್ಳುವುದಕ್ಕೆ ಸಾಧ್ಯವೇ? ಮಾತನಾಡಿದರೆ ಜೋರಾಗಿ ಮಾತನಾಡುತ್ತಾರೆ ಎಂದು ಹೇಳುತ್ತಾರೆ, ರೈತರು ಇದ್ದರೆ ತಾನೇ ನಾವೆಲ್ಲರೂ ಇರುವುದು? ಅವರು ಬೆಳೆದರೆ ತಾನೇ ನಮಗೆಲ್ಲರಿಗೂ ಆಹಾರ ದವಸಗಳು ಸಿಗುವುದು? ಅವರುಗಳು ತೆರಿಗೆ ಕೊಟ್ಟರೆ ತಾನೇ ನಾವೆಲ್ಲರೂ ಇಲ್ಲಿ ಕುಳಿತುಕೊಳ್ಳುವುದ? ಎಲ್ಲಾ ವ್ಯವಹಾರಗಳನ್ನು ಮಾಡುವುದು, ಮಜಾ ಮಾಡುವುದು? ಎಲ್ಲವೂ ಅವರ ಮುಖಾಂತರವೇ ನಮಗೆಲ್ಲಾ ಆಗಬೇಕು. ಹೀಗೆ ನಮಗೆ ಎಲ್ಲಾ ವಿಧದಲ್ಲಿಯೂ ಕಾರಣಕರ್ತರಾದವರು ಸರ್ವನಾಶ ಆಗುತ್ತಿರುವಾಗ, ಅವರ ಬಗ್ಗೆ ಚಿಂತನೆ ಮಾಡದಿದ್ದರೆ ನಮ್ಮನ್ನು ಯಾವ ದೇವರು ಮೆಚ್ಚುತ್ತಾನೆ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ..

ಶ್ರೀ ಕೆ.ಹೆಚ್. ಹನುಮೇಗೌಡ : ಏಕೆ ಸ್ವಾಮಿ ಎದ್ದುಬಿಟ್ಟರಲ್ಲ? ದಯಮಾಡಿ ಸ್ವಲ್ಪ ಕುಳಿತುಕೊಳ್ಳಿ, ನಾನೂ ಸ್ವಲ್ಪ ಮಾತನಾಡುತ್ತೇನೆ. ಆ ಮೇಲೆ ಮಾತನಾಡುವಿರಂತೆ. ರೈತರ ಬಗ್ಗೆ ಮಾತನಾಡುವಾಗಲೂ ತಾವುಗಳು ಎದ್ದು ನಿಲ್ಲುತ್ತೀರಿ? ಒಂದು ನಿಮಿಷ ಸುಮ್ಮನೆ ಇರಿ..

ಅಧ್ಯಕ್ಷರು : ಹನುಮೇಗೌಡರೇ, ಅವರು ನಿಮ್ಮನ್ನು ಸಪೋರ್ಟ್ ಮಾಡಲು ಹೊರಟರು..

ಶ್ರೀ ಕೆ.ಹೆಚ್. ಹನುಮೇಗೌಡ : ನಾನು ಮೊದಲು ಮಾತನಾಡುತ್ತೇನೆ, ಆಮೇಲೆ ಅವರು ಬೇಕಾದರೆ ಸಪೋರ್ಟ್ ಮಾಡಿ ಮಾತನಾಡಲಿ. ಹೀಗೆ ರೈತರಿಗೆ ಎಲ್ಲಾ ವಿಧದಲ್ಲಿಯೂ ಅನ್ಯಾಯವಾಗುತ್ತಾ ಇದೆ. ಅವರ ಶೋಷಣೆಯಾಗುತ್ತಾ ಇದೆ. ಅವರು ಪಡಬಾರದ ಕಷ್ಟಕ್ಕೊಳಗಾಗಿದ್ದಾರೆ. ಅವರು ಬಾರಿ ಚಿಂತನೆಯಲ್ಲಿ, ತೊಂದರೆಯಲ್ಲಿದ್ದಾರೆ. ಅವರ ಸಮೂಹವೇ ಸರ್ವನಾಶವಾಗುವ ಕಾಲ ಬಂದಿದೆ- ಎಂದು ಹೇಳಿದರೂ ತಪ್ಪಾಗಲಾರದು. ಈ ಸಂದರ್ಭದಲ್ಲಿ ಸರಕಾರದವರ ಅವರ ಬಗ್ಗೆ ಆಲೋಚನೆ ಮಾಡಬೇಕು. ನಾವು ನಿಮ್ಮ ಹತ್ತಿರ ಇಲ್ಲದ್ದು ಏನನ್ನೂ ಕೇಳುವುದಿಲ್ಲ. ಹೆಚ್ಚಿಗೆ ಏನ್ನನ್ನೂ ಕೇಳುವುದಿಲ್ಲ, ನಾವು ಮಾನರೂಢವಾಗಿ ಬಾಳಿ ಬದುವುದಕ್ಕೆ ಎಷ್ಟು ಬೇಕೋ ಅಷ್ಟನ್ನು ಕನಿಷ್ಟ ಅನುಕೂಲತೆಗಳನ್ನಾದರೂ ನಮಗೆ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತಿದ್ದೇವೆ. ಆದ್ದರಿಂದ ಬೇರೆ ರಾಜ್ಯಗಳಲ್ಲಿರುವಂಥ ಹಾಲಿನ ದರವನ್ನು ನಮ್ಮ ರಾಜ್ಯದಲ್ಲಿಯೂ ಕೊಟ್ಟು ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಬಂಗಾರಪ್ಪನವರು ಇಲ್ಲಿಯೇ ಕುಳಿತುಕೊಂಡಿದ್ದಾರೆ. ಹಿಂದೆ ಅವರು ಕೃಷಿಮಂತ್ರಿಯಾಗಿದ್ದಾಗ, ಈ ಅಗ್ರಿಕಲ್ಚರಲ್ ಸಮುದಾಯ ಏನು ತೊಂದರೆಯಲ್ಲಿದೆ ಅವರನ್ನು ಸುಧಾರಿಸಲು ಏನೇನೋ ಸುಧಾರಣೆ ಮಾಡುತ್ತೇನೆ ಎಂದೆಲ್ಲಾ ಹೇಳಿದ್ದರು. ಅವರು ಈಗ ಅನುಕೂಲ ಮಾಡಿಕೊಡುವ ಸ್ಥಾನದಲ್ಲಿದ್ದಾರೆ. ಅವರಿಗೆ ನಿಜವಾಗಿಯೂ ಇವರ ಬಗ್ಗೆ ಅನುಕಂಪ ಇದ್ದರೆ ರೈತರಿಗೆ ಏನು ಅನ್ಯಾಯವಾಗಿದೆ ಅದನ್ನು ಸರಿಪಡಿಸಬೇಕೆಂದು ಬಹಳ ವಿನಯಪೂರ್ವಕವಾಗಿ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ನಾನು ಒಂದು ಸೂಚನೆ ಕೊಟ್ಟಿದ್ದೆ..

ಶ್ರೀ ಎಸ್. ಬಂಗಾರಪ್ಪ : ಅವರು ಏನು ಕೊಟ್ಟಿದ್ದಾರೆ ...

ಶ್ರೀ ವಾಟಾಳ್ ನಾಗರಾಜ್ : ತಾವುಗಳು ಹೀಗೆ ಪದೇ ಪದೇ ನಮ್ಮನ್ನು ಪ್ರಶ್ನಿಸಿದರೆ ನಮಗೆ ಕಷ್ಟವಾಗುತ್ತದೆ. ಇದೊಂದು ರೀತಿಯಲ್ಲಿ ನೀವು ಹೆಡ್‌ಮಾಸ್ಟರ್ ಇದ್ದಹಾಗೆ ಮತ್ತು ನಾವು ಮಕ್ಕಳು ಇದ್ದಹಾಗೆ ಆಗಿದೆ. ಹೀಗೆ ಹೆಡ್‌ಮಾಸ್ಟರ್‌ರ ವ್ಯಾಕರಣವನ್ನು ನಮಗೆ ಹೇಳುತ್ತಾ ಇದ್ದೀರಿ... ಹೀಗೆ ಆದರೆ ನಮಗೆ ಕಷ್ಟವಾಗುವುದಿಲ್ಲವೇ?

ಅಧ್ಯಕ್ಷರು : ನೀವು ವ್ಯಾಕರಣಕ್ಕೆ ಹೋಗ ಬೇಡಿ, ತಾತ್ಪರ್ಯಕ್ಕೆ ಬನ್ನಿ.

ಶ್ರೀ ಎಸ್. ಬಂಗಾರಪ್ಪ : ನೀವು ಸಹ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೀರಿ ಎಂದು ಕೇಳಿದೆ; ನೀವು ಇದಕ್ಕೆ ಸಿಗ್ನೆಟರಿ ಅಲ್ಲದೇ ಎದ್ದು ನಿಂತು ಮಾತನಾಡುತ್ತಿದ್ದರೋ ಏನೋ ಎಂದು ಕೇಳಿದೆ ಅಷ್ಟೇ:

ಶ್ರೀ ವಾಟಾಳ್ ನಾಗರಾಜ್ : ಅವರು ಇದೇ ತರಹ ಮಾತನಾಡಿ ..

ಅಧ್ಯಕ್ಷರು : ಮಾನ್ಯ ಸಭಾನಾಯಕರು ರೂಲ್ಸ್ ಚೌಕಟ್ಟಿನಲ್ಲಿ ಸರಿಯಾಗಿಯೇ ಇದ್ದಾರೆ. ಅದನ್ನು ನಾನು ಎತ್ತಿ ಹಿಡಿಯಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಹೌದು ನಿಜಕ್ಕೆ ಅವರು ಕೊಟ್ಟಿರತಕ್ಕ ಬೆಲೆಯನ್ನು ಬೇರೆ ಯಾರೂ ಕೂಡ ಕೊಟ್ಟಿರಲಿಕ್ಕಿಲ್ಲ ಎಂದು ಕಾಣುತ್ತದೆ. ಯಾವಾಗಲು ಅವರು ಹೇಳುತ್ತಿದ್ದುದನ್ನು ಈ ದಿವಸಗಳಲ್ಲಿ ಹೇಳುತ್ತಾ ಇಲ್ಲ, ಅದರಿಂದ ನನಗಂತೂ ಸಂತೋಷವಾಗಿದೆ.

ಅಧ್ಯಕ್ಷರು : ನಾನು, ಅವರ ಕ್ರಿಯಾಲೋಪವನ್ನು ಎತ್ತಿಹಿಡಿಯಬೇಕಾಗುತ್ತದೆ. ಹಾಗೆ ನಾನು ಅವರ ಕ್ರಿಯಾಲೋಪವನ್ನು ಎತ್ತಿಹಿಡಿದರೆ ತಾವು ಕುಳಿತುಕೊಳ್ಳಬೇಕಾಗುತ್ತದೆ. ಒಟ್ಟಿನಲ್ಲಿ ಬೆಲೆ ಹೆಚ್ಚುಮಾಡಬೇಕೆಂಬುದು ಒಟ್ಟು ತಾತ್ಪರ್ಯ. ಇದರ ಬಗ್ಗೆ ಸರ್ಕಾರ ಏನಾದರೂ ಹೇಳಿಕೆ ಮಾಡ್ತಾರೇನೋ ನೋಡೋಣ.

ಶ್ರೀ ಡಿ.ಬಿ. ಚಂದ್ರೇಗೌಡ : ಅದಕ್ಕೆ ಮುಂಚೆ Do they stand by the commitment given on the floor of the House ಬಸವಲಿಂಗಪ್ಪನವರು ಮಂತ್ರಿಯಾಗಿದ್ದ ಕಾಲದಲ್ಲಿ ಹಾಲಿನ ಬೆಲೆ ಜಾಸ್ತಿ ಮಾಡುತ್ತೇನೆ ಎಂದು ಹೇಳಿದ್ದರು.

ಶ್ರೀ ವಾಟಾಳ್ ನಾಗರಾಜ್ : ಆದ್ದರಿಂದ ಬೆಲೆ ಏರಿಕೆಯ ಬಗ್ಗೆ ಸರ್ಕಾರದ ನೀತಿ ಏನು ಎಂದು ಸ್ಪಷ್ಟಪಡಿಸಬೇಕು. ಈಗಾಗಲೇ ತಮಗೆ ಗೊತ್ತಿರುವಂತೆ ನಮ್ಮ ಗಡಿಪ್ರದೇಶದಲ್ಲಿ ದನಕರುಗಳನ್ನು ಸಾಕುವುದಕ್ಕಾಗದೆ ಕೇರಳ ಗಡಿಯಲ್ಲಿ, ಚಾಮರಾಜನಗರ, ,ಗುಂಡ್ಲುಪೇಟೆ ಗಡಿಯಲ್ಲಿ ಒಂದು ದಿನಕ್ಕೆ ಕನಿಷ್ಟ 500 ರಿಂದ ಸಾವಿರ ದನಕರುಗಳನ್ನು ಬೇರೆ ರಾಜ್ಯಕ್ಕೆ ಕಸಾಯಿಖಾನೆಗಳಿಗೆ ಸಾಗಿಸುತ್ತಿದ್ದಾರೆ. ನನಗನಿಸುತ್ತದೆ, ಅವನ್ನು ಸಾಕುವುದಕ್ಕೆ ಆಗುವುದಿಲ್ಲ ಎಂಬ ಪರಿಸ್ಥಿತಿ ಉದ್ಭವವಾಗಿದೆ. ಕರ್ನಾಟಕದ ಎಲ್ಲ ಕಡೆ ಇದು ಇರುವಂಥಾದ್ದು. ಆದ್ದರಿಂದ ಸರ್ಕಾರ ಇದಕ್ಕೆ ಸಬ್ಸಿಡೀನೋ ಅಥವಾ ಹೆಚ್ಚಿನ ಹಣವನ್ನು ಕೊಡುವ ಮೂಲಕವೋ ಆ ರೈತರಿಗೆ ಅನುಕೂಲ ಮಾಡುವ ಬಗ್ಗೆ ಸರ್ಕಾರದ ನೀತಿಯೇನು ಎಂದು ಮುಖ್ಯಮಂತ್ರಿಗಳು ತಾವು ದಯಮಾಡಿ ಹೇಳಬೇಕು ಮತ್ತು ಇಂದು ಕೊನೆ ದಿನದ ಸಭೆ. ಆದ್ದರಿಂದ ಬರೀ ಇದೊಂದೇ ಅಲ್ಲ, ಇನ್ನೂ ಎರಡು ಮೂರು ವಿಚಾರಗಳನ್ನು

ಪ್ರಸ್ತಾಪ ಮಾಡಬೇಕಾಗಿದೆ. ಈಗ ದಯವಿಟ್ಟು ಹಾಲಿನ ಬಗ್ಗೆ ಸರ್ಕಾರದ ನೀತಿಯೇನೆಂದು ಹೇಳಬೇಕೆಂದು ಕೋರುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ರೈತರಿಗೆ ಹಾಲಿನ ದರ ಜಾಸ್ತಿ ಮಾಡಬೇಕೆಂಬುದು ಬಹಳ ಅಗತ್ಯವಿರುವ ವಿಚಾರ ಇಲ್ಲಿ ಇದು ಪ್ರಸ್ತಾಪವಾಗುತ್ತಿದೆ. ನಾನು ಹೇಳೋದು ರೈತಾಪಿ ಜನರು ಹಸುಗಳಿಗೆ ಹುಲ್ಲು ಹಾಕಿ ಅದಕ್ಕೆ ಬೇಕಾದ ಸಾಮಗ್ರಿ ಕೊಟ್ಟು ಸಾಕುವ ಸ್ಥಿತಿಯಲ್ಲಿ ರೈತನಿಲ್ಲ. ಆತನಿಗೆ ಕೊಡುತ್ತಿರುವ ಬೆಲೆ ತುಂಬ ಕಡಿಮೆಯಾಗಿದೆ. ಹಾಲಿನ ಬೆಲೆ ಜಾಸ್ತಿ ಮಾಡುವಾಗ, ಕನಸ್ಯೂಮರ್‌ಗೆ ಇಂದು ಯಾವ ಬೆಲೆ ವಿಧಿಸಿದ್ದೇವೆ, ಅದು ಯಾವ ಕಾರಣಕ್ಕೂ ಜಾಸ್ತಿಯಾಗಬಾರದು. ಇಲಾಖೆಯಲ್ಲಿ ಏನು ಸೋರಿ ಹೋಗ್ತಿದೆ. ಅದನ್ನು ತಡೆಗಟ್ಟಿ ಲಾಭದಾಯಕ ಮಾಡಲು ಸಾಧ್ಯವಾದರೆ ಮಾಡಿ. ಇಲ್ಲವಾದರೆ ನೋಲಾಸ್ ನೋಪ್ರಾಫಿಟ್ ರೀತಿಯಲ್ಲಿ ಅದು ನಡೆಯಲಿ.

ಆದರೆ ಹಾಲಿನ ಬೆಲೆ ಜಾಸ್ತಿ ಮಾಡಬೇಕಾದರೆ ಇಂದಿನ ವಿತರಣಾ ಬೆಲೆ ಬೇರೆ ರಾಜ್ಯಗಳಿಗೆ ಹೋಲಿಸಿದರೂ ಸಹ ಈಗಾಗಲೇ ಜಾಸ್ತಿ ಇದೆ. ಯಾವ ಕಾರಣಕ್ಕೂ ಕನ್‌ಸ್ಯೂಮರಿಗಿರುವ ಬೆಲೆ ಜಾಸ್ತಿಯಾಗಬಾರದು, ರೈತನಿಗೆ ಬೆಲೆ ಜಾಸ್ತಿ ಕೊಟ್ಟು ಆಗತ್ಯವಿದ್ದರೆ ಆ ಲಾಸನ್ನು ಸಬ್ಸಿಡಿ ಕೊಟ್ಟು ಸರ್ಕಾರ ತುಂಬಿಕೊಡಲಿ. ಈ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಕೊಳ್ಳುವ ಬೆಲೆ ಈಗಾಗಲೇ ದುಬಾರಿಯಾಗಿರುವುದರಿಂದ ಅದನ್ನು ಜಾಸ್ತಿ ಮಾಡದೇ ರೈತರಿಗೆ ಹೆಚ್ಚು ಸಹಕಾರ ಕೊಡುವ ಬಗ್ಗೆ ಸರ್ಕಾರ ಯೋಜನೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡಬಳ್ಳಾಪುರ): ಮಾನ್ಯ ಅಧ್ಯಕ್ಷರೇ, ನಾನು ದಿನಕ್ಕೆ 200 ಲೀಟರ್ ಹಾಲು ಸಪ್ಲೈ ಮಾಡ್ತಿದ್ದೀನಿ. ಸೊಸೈಟಿಗೆ ನನ್ನ ಸಂಬಂಧಿಯೊಬ್ಬ ಟೈಪಿಸ್ಟಾಗಿ ವಿಧಾನಸೌಧದಲ್ಲಿ ಕೆಲಸ ಮಾಡುತ್ತಿದ್ದ. ಅವನನ್ನು ಕೆಲಸ ಬಿಡಿಸಿ ತಗೊಂಡು ಹೋಗಿ ನನ್ನ ತೋಟದಲ್ಲಿರು ಏನಾದರೂ ಬಂದರೆ ನೀನದ ತಗೊ ನನಗರ್ದ ಕೊಡು ಎಂದು ಇಟ್ಟಿ. ಈಗ 8 ದಿನದಿಂದ ಲೆಕ್ಕ ಹಾಕಿದರೆ ಸಗಣಿ ಉಳಿಯುತ್ತದೆ. ಇನ್ನೇನು ಉಳಿಯೋಲ್ಲ, ದಿನಾ 200 ಲೀಟರ್ ಹಾಲು ಕೊಡ್ತೇನೆ. ಹೆಣ್ಣು ಕರು ಹುಟ್ಟಿದರೆ ಒಂದು ಚಾನ್ಸ್, ಗಂಡು ಕರು ಹುಟ್ಟಿದರೆ ಹೋಯ್ತು. ನಮ್ಮ ಪರಿಸ್ಥಿತಿ ಹೇಗಿದೆ ಎಂದರೆ 40 ಹಸು ನನ್ನ ಬಳಿ ಇವೆ, ಮಾರಿದರೆ ಯಾರೂ ತಗೊಳೋದಿಲ್ಲ, ಏಕೆಂದರೆ ರೇಟ್ ಗಿಟ್ಟೋದಿಲ್ಲ, ನಮ್ಮ ಕಡೆ ಬೆಳೆಯಿಲ್ಲದೆ ಹುಲ್ಲೂ ಇಲ್ಲ ; ಬೂಸಾ ಮತ್ತು ಹಿಂಡಿ ಇವುಗಳ ಧಾರಣೆಯಂತೂ ಗಗನಕ್ಕೇರಿದೆ. ಕಡಲೆಕಾಯಿ ಉತ್ಪತ್ತಿ ಕರ್ನಾಟಕದಲ್ಲಿ, ಆಂಧ್ರದಲ್ಲಿ ಕಡಿಮೆಯಾಗಿದೆ; ಬಹಳ ಬೆಳೆ ಹಾಳಾಗಿದೆ. ಹೀಗಾಗಿ ನಮ್ಮ ಸ್ಥಿತಿ ಚಿಂತಾಜನಕವಾಗಿದೆ: ಇಲ್ಲ, ಹಾಲಿನ ಬೆಲೆ ಜಾಸ್ತಿ ಮಾಡಬೇಕಾಗುತ್ತದೆ, ಇಲ್ಲದಿದ್ದರೆ ಅಮೇರಿಕಾದಿಂದ ಹಾಲಿನ ಪೌಡರನ್ನು ಇಂಪೋರ್ಟ್ ಮಾಡಿಕೊಂಡು ನೀವೆಲ್ಲ ಹಸುಗಳನ್ನು ಸಾಕಬೇಡಿ ಎಂದು ನಮಗೆ ಹೇಳಬೇಕು. ಇಂದು ಬೆಂಗಳೂರಿನಲ್ಲಿ ಕಡಿಮೆಯಾಗಿರೋದು ಯಾವುದು? ಒಂದು ಕಾಲದಲ್ಲಿ ಅಂದರೆ ಮೂರು ವರ್ಷಗಳ ಹಿಂದೆ ಸಿಗುತ್ತಿದ್ದ 6 ರೂ ಬಾಟಲ್ ಬೀರು ಇಂದು 20 ರೂ. ವೆಸ್ಟೆಂಟ್ ಹೋಟೆಲ್ ಹೋದರೆ 50ರೂ: ಇದಕ್ಕೆ ಮಾತ್ರ ಜನಕ್ಕೆ ದುಡ್ಡಿದೆ ಕೊಡೋದಕ್ಕೆ, ಹಾಲಿಗೆ ಇನ್ನೊಂದೆಂಟಾಣೆ ಹೆಚ್ಚು ಕೊಡಲು ಇಲ್ಲವೇ? ದಯವಿಟ್ಟು ನೀವು ಸಬ್ಸಿಡಿ ಕೊಡ್ತಿರೋ ಏನು ಮಾಡ್ತಿರೋ ನನಗೊತ್ತಿಲ್ಲ; ಹಾಲಿನ ದರ ನಮಗೆ ಗಿಟ್ಟೋದಿಲ್ಲ; ಹಾಲಿನ ವ್ಯವಸ್ಥೆ

ಸರಿಯಾಗಿ ಸಪ್ಲೈ ಆಗಬೇಕೆಂದಿದ್ದರೆ ಮತ್ತು ಜನಗಳ ಆರೋಗ್ಯ ನೋಡಬೇಕಾದದ್ದು ಸರ್ಕಾರದ ಮುಖ್ಯ ಕರ್ತವ್ಯವಾಗಿದೆ. ನಾವು ನಮ್ಮ ಮಕ್ಕಳ ಬಾಯಿಕಟ್ಟಿ ನಗರ ಪ್ರದೇಶಗಳಿಗೆ ಹಾಲು ಕೊಡುತ್ತಿದ್ದೇವೆ; ಇದರ ಬಗ್ಗೆ ಹಿಂದೆಮುಂದೆ ನೋಡೋದು ಅನಾವಶ್ಯಕ; ಆದ್ದರಿಂದ ಹಾಲಿನಧಾರಣೆ ಜಾಸ್ತಿ ಮಾಡಿ ಎಂದು ನಾನು ಒತ್ತಾಯ ಮಾಡ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹಾಲಿನ ಬೆಲೆಯನ್ನು ಜಾಸ್ತಿ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಮುಖ್ಯಮಂತ್ರಿಯವರು ಇದರ ಬಗ್ಗೆ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಬೈರೇಗೌಡರು, ಹನುಮೇಗೌಡರು, ಜಾಲಪ್ಪನವರು, ಸಿಂಧ್ಯರವರು ಹಾಲಿನ ಬೆಲೆಯನ್ನು ಏರಿಸಬೇಕೆಂಬ ಸಲಹೆಯನ್ನು ಕೊಟ್ಟಿದ್ದಾರೆ. ಉತ್ಪಾದಕ ದೃಷ್ಟಿಯಿಂದ ಹಾಲಿನ ಬೆಲೆಯನ್ನು ಏರಿಸಬೇಕಾಗುತ್ತದೆ. ಏಕೆಂದರೆ ಬೈರೇಗೌಡರವರು ಹೇಳಿರುವ ಪ್ರಕಾರ 30-40 ಪರ್ಸೆಂಟ್ ಬೂಸ ಮತ್ತು ಹಿಂಡಿ ಬೆಲೆ ಜಾಸ್ತಿಯಾಗಿದೆ ಎಂದು ಹೇಳಿದರು. ಸನ್ಮಾನ್ಯ ಪಶುಸಂಗೋಪನೆ ಸಚಿವರು ಈಗ ಇಲ್ಲ, ಅವರೊಡನೆ ಇದರ ಬಗ್ಗೆ ಸಮಾಲೋಚನೆ ಮಾಡುತ್ತೇನೆ. ಇದು ಗಂಭೀರವಾದ ಪ್ರಶ್ನೆ. ಈ ಮಧ್ಯೆ ಸನ್ಮಾನ್ಯ ಯಡಿಯೂರಪ್ಪನವರು ಒಂದು ಪ್ರಶ್ನೆಯನ್ನು ತಂದಿದ್ದಾರೆ. ಉತ್ಪಾದಕರಿಗೆ ಬೆಲೆಯನ್ನು ಜಾಸ್ತಿ ಮಾಡಿ ; ಆದರೆ ಗ್ರಾಹಕರಿಗೆ ಬೆಲೆಯನ್ನು ಜಾಸ್ತಿ ಮಾಡಬೇಡಿ ಎಂದು. ಇದರಲ್ಲಿ ದ್ವಂದ್ವ ಬಂದುಬಿಟ್ಟಿದೆ.

ಶ್ರೀ ವಾಟಾಳ್ ನಾಗರಾಜ್ : ಆದುದರಿಂದ ನಾನು ಒಂದು ಪರಿಹಾರವನ್ನು ನಾನು ಕೊಟ್ಟಿದ್ದೇನೆ. ಏನೆಂದರೆ, ಸರ್ಕಾರದಿಂದ ಸಬ್ಸಿಡಿ ಕೊಡಿ, ಇವರಿಗೂ ತೊಂದರೆಯಾಗಬಾರದು. ಅವರಿಗೂ ತೊಂದರೆಯಾಗಬಾರದು.

ಶ್ರೀ ಎಂ. ವೀರಪ್ಪ ಮೊಯಿಲಿ : ಅದು ಬಹಳ ಸುಲಭ.

(ಗೊಂದಲ)

ಶ್ರೀ ಕೆ.ಹೆಚ್. ರಂಗನಾಥ್ (ಹಿರಿಯೂರು): ಮಾನ್ಯ ಅಧ್ಯಕ್ಷರೆ, ಉತ್ಪಾದಕರಿಂದ ಹಾಲನ್ನು ಮೂರು ರೂ.ಗಳಿಗೆ ಒಂದು ಲೀಟರಿನಂತೆ ತೆಗೆದುಕೊಳ್ಳುತ್ತಾರಂತೆ. ಮಾರುವುದು ಆರು ರೂಪಾಯಿಯಾಗುತ್ತದೆ. ಅಂದರೆ ಡೇರಿಯವರು ಅದನ್ನು ತೆಗೆದುಕೊಂಡು ಮಾರುವಷ್ಟರಲ್ಲಿ ಒಂದು ಲೀಟರಿಗೆ ಮೂರು ರೂ.ಗಳ ಖರ್ಚು ಬರುತ್ತದೆಂದರೆ ಅದನ್ನು ಯಾರು ಒಪ್ಪುವ ಮಾತಲ್ಲ. ಅದನ್ನು ಪರೀಕ್ಷೆ ಮಾಡಬೇಕು. ಏಕೆಂದರೆ ಒಂದು ಲೀಟರಿಗೆ ಮೂರು ರೂ.ಗಳ ಖರ್ಚು ಎಂದಿಗೂ ಬರುವುದಕ್ಕೆ ಸಾಧ್ಯವಿಲ್ಲ, ಸಾಧ್ಯವಾದರೆ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಹೆಚ್ಚು ಮಾಡುವುದಂತೂ ಅನಾವಶ್ಯಕ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಹಿರಿಯ ಸದಸ್ಯರಾದ ಶ್ರೀ ರಂಗನಾಥ್ ಅವರು ಹೇಳಿದ ಪ್ರಕಾರ ಗ್ರಾಹಕರು ಮತ್ತು ಉತ್ಪಾದಕರು ಮಧ್ಯೆ ಏನು ಬೆಲೆ ಏರಿಕೆ ಆಗುತ್ತದೆ ಕಾಸ್ಟಿಂಗ್‌ನಲ್ಲಿ; ಅದು ಸಾಕಷ್ಟು ಎಸ್ಟಾಬ್ಲಿಶ್‌ಮೆಂಟ್‌ಗೆ ಮತ್ತು ಇನ್ನಿತರ ಖರ್ಚುಗಳಿಗೆ ಹೋಗುವುದರಿಂದ, ಅದನ್ನು, ಕಡಿಮೆ ಮಾಡಿ ಯಾವ ರೀತಿ ಉತ್ಪಾದಕರಿಗೆ ಜಾಸ್ತಿ ಬೆಲೆಯನ್ನು ಕೊಡಬಹುದು, ಇದಕ್ಕೆ ಒಂದು ಶಾಸ್ತ್ರೀಯವಾದ ಸೂತ್ರವನ್ನು ಕಂಡು ಹಿಡಿಯಬೇಕೆಂದು ಅವರು ಹೇಳಿದ್ದಾರೆ.

ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ ಉತ್ಪಾದಕರ ದೃಷ್ಟಿಯನ್ನು ನಾವು ನೋಡಬೇಕಾಗಿದೆ. ರೈತರಿಗೆ, ಉತ್ಪಾದಕರಿಗೆ ಹೆಚ್ಚಿನ ಬೆಲೆ ಸಿಗಬೇಕೆನ್ನುವ ತತ್ವದಲ್ಲಿ ನಮ್ಮ ಸರ್ಕಾರ ಕೂಡ ವಿಶ್ವಾಸವನ್ನು ಇಟ್ಟುಕೊಂಡಿದೆ. ಈ ಬಗ್ಗೆ ಸರ್ಕಾರ ಆಲೋಚನೆ ಮಾಡಿ ವ್ಯವಹಾರಿಕವಾಗಿ, ಗ್ರಾಹಕರ ಮತ್ತು ಉತ್ಪಾದಕರ ದೃಷ್ಟಿಯನ್ನು ಸಮನ್ವಯಗೊಳಿಸಿ ಇದರ ಬಗ್ಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಇದರ ಬಗ್ಗೆ ಈ ಹಿಂದೆ ಹಲವಾರು ಬಾರಿ ಪ್ರಸ್ತಾಪವಾಗಿದೆ. ಸರ್ಕಾರ ಇವತ್ತು ಏನು ಇದರ ಬಗ್ಗೆ ಹೇಳಿದ್ದಾರೆ; ಇದನ್ನೇ ಹಿಂದೆ ಕೂಡ ಹೇಳಿದ್ದಾರೆ. ಇದನ್ನು ಪರಿಶೀಲನೆ ಮಾಡುತ್ತೇವೆಂದರೆ ಹೇಗೆ? ಇವತ್ತು ವಾಟಾಳ್ ನಾಗರಾಜ್‌ರವರು ಹೇಳಿರುವ ಹಾಗೆ ಪ್ರತಿದಿವಸ 500ರಿಂದ 1000 ಹಸುಗಳು ಕಸಾಯಿಖಾನೆಗೆ ಹೋಗುವಂಥ ಒಂದು ಭೀಕರ ಪರಿಸ್ಥಿತಿ ಉಂಟಾಗಿದೆ. ಆದರೂ ಇದನ್ನು ಪರಿಶೀಲನೆ ಮಾಡುತ್ತೇನೆ ಎಂದರೆ ಹೇಗೆ? ಕೆಲವು ಕಡೆ ಏನಾಗಿದೆ ಎಂದರೆ, ಒಂದು ಲೀಟರ್ ಹಾಲು 10-15 ರೂ.ಗಳಿಗೆ ಮಾರಾಟವಾಗುತ್ತಿದೆ. ಇದಕ್ಕೆ ಕಾರಣವೇನು? ಹಾಲು ಕೊಡುವಂಥ ಹಸುಗಳು ಕಸಾಯಿಖಾನೆ ಸೇರುತ್ತಿರುವುದರಿಂದ ಕೆಲವು ಕಡೆ ಹಾಲು ಲೀಟರಿಗೆ ರೂ. 50.60ಕ್ಕೆ ಮಾರಾಟವಾಗಿದೆ ಎಂದು ಹೇಳುತ್ತಾರೆ. ಆದರೆ ಇದು ಎಷ್ಟು ನಿಜವೋ ನನಗೆ ಗೊತ್ತಿಲ್ಲ. ಆದರೆ ಲೀಟರಿಗೆ 10-15 ರೂ. ಗಳಿಗೆ ಮಾರಾಟವಾಗಿರುವುದಂತೂ ನಿಜ. ಈಗಾಗಲೇ ಇದರ ಬಗ್ಗೆ ಸಾಕಷ್ಟು ತಡವಾಗಿದೆ. ತಡವಾಗಿರುವ ಕಾರಣದಿಂದ ಉತ್ಪತ್ತಿ ಕಡಿಮೆಯಾಗಿದೆ. ಎಷ್ಟು ಹಾಲು ಬರಬೇಕಿತ್ತೋ ಅಷ್ಟು ಹಾಲು ಉತ್ಪತ್ತಿಯಾಗುತ್ತಲ್ಲ. ಈ ಕಾರಣದಿಂದ ಹಾಲಿನ ಬೆಲೆ ಸಿಕ್ಕಾಪಟ್ಟೆ, ಯದ್ವಾತದ್ವ ಏರಿರುವ ಪರಿಸ್ಥಿತಿ ಉಂಟಾಗಿದೆ. ಹಸುಗಳ ಸಂಖ್ಯೆಯೂ ಕಡಿಮೆಯಾಗಿದೆ. ಹಸುಗಳೀನು ನಾಳೆ ಬೆಳಿಗ್ಗೆಯಾಗುವುದರಲ್ಲಿ ಕರು ಹಾಕುವುದಿಲ್ಲ. ಅದಕ್ಕೂ 9-10 ತಿಂಗಳೂ ಬೇಕಾಗುತ್ತದೆ. ಕರು ಬೆಳೆದು ಹಾಲು ಕೊಡುವುದಕ್ಕೆ ಮೂರು ವರ್ಷ ಬೇಕಾಗುತ್ತದೆ. ಈ ಎಲ್ಲಾ ಕಾರಣದಿಂದ ನಾವು ಇದರ ಪ್ರತಿಫಲವನ್ನು ಅನುಭವಿಸಬೇಕಾಗಿದೆ. ಆದ್ದರಿಂದ ಇದರ ಬಗ್ಗೆ ಈಗಾಗಲೇ ಚರ್ಚೆಯಾಗಿದೆ. ಸರ್ಕಾರದಿಂದ ಆಶ್ವಾಸನೆ ಕೂಡ ಬಂದಿದೆ. ಆದರೆ ಅದನ್ನು ಕಾರ್ಯಗತ ಮಾಡಬೇಕಾಗಿದೆ. ಸುಮ್ಮನೆ ಪರಿಶೀಲನೆ ಮಾಡುತ್ತೇನೆ, ಪರಿಶೀಲನೆ ಮಾಡುತ್ತೇನೆ ಎಂದು ಸಂಸದೀಯ ವ್ಯವಹಾರಗಳ ಸಚಿವರು ಅವರ ಭಾಷೆಯನ್ನು ಉಪಯೋಗಿಸಿದ್ದಾರೆ. ಸಂಸದೀಯ ವ್ಯವಹಾರದ ಭಾಷೆಯನ್ನು ಬಿಟ್ಟು ಇವತ್ತು ರೈತರ ನೆರವಿಗೆ ಸರ್ಕಾರ ಬರಬೇಕಾಗಿದೆ. ಇದು ತತ್‌ಕ್ಷಣ ಆಗಬೇಕಾಗಿರುವಂಥ ಕೆಲಸ. ದಯವಿಟ್ಟು ಇದರ ಬಗ್ಗೆ ಕೂಡಲೇ ಕ್ರಮವನ್ನು ತೆಗೆದುಕೊಂಡು ಬೆಲೆಯನ್ನು ಏರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಮಾರ್ಕೇಟಿನಲ್ಲಿ ಎಲ್ಲಾ ಬೆಲೆಗಳು ಜಾಸ್ತಿಯಾಗಿದೆ. ಲೇಬರ್ ಚಾರ್ಜಸ್ ಜಾಸ್ತಿಯಾಗಿದೆ. ಕಡಿಮೆ ಕೊಟ್ಟರೆ ಯಾರೂ ಮುಂದೆ ಬರುವುದಿಲ್ಲ. ಪ್ರೈವೇಟ್‌ನವರೆಗೆ ಸಪ್ಲೈ ಮಾಡಿದರೆ ಐದು ರೂಪಾಯಿಯನ್ನು ಕೊಡುತ್ತಾರೆ. ನಮ್ಮ ಪಕ್ಕದ ಹಳ್ಳಿಯಲ್ಲಿ ಪ್ರತಿದಿವಸ 30-40 ಲೀಟರ್‌ಗಳನ್ನು ಐದು ರೂಪಾಯಿಯನ್ನು ಕೊಟ್ಟು ಪ್ರೈವೇಟ್‌ನವರು ತೆಗೆದುಕೊಂಡು ಹೋಗುತ್ತಿದ್ದಾರೆ. ನಿಮಗೆ ಕೊಟ್ಟರೆ 3-50 ಪೈಸೆ ಕೊಡುತ್ತೀರಿ, ಇದರಿಂದ ರೈತರು ಸಹಕಾರ ಸಂಘಗಳಿಗೆ ಕೊಡುವುದನ್ನು ನಿಲ್ಲಿಸಿಬಿಡುತ್ತಾರೆ. ಏಕೆಂದರೆ ಪ್ರತಿದಿವಸ

300 ರಿಂದ 500 ರೂಪಾಯಿಯನ್ನು ಕಳೆದುಕೊಂಡು ವ್ಯಾಪಾರ ಮಾಡಲೂ ಯಾರು ಹೋಗುವುದಿಲ್ಲ, ಮುಖ್ಯ ಮಂತ್ರಿಗಳು ಇದ್ದಾರೆ. ಇವತ್ತು ಕಡೆ ದಿವಸ ; ಇದರ ಬಗ್ಗೆ ಮುಖ್ಯಮಂತ್ರಿಗಳು ಸರ್ಕಾರದ ನಿರ್ಧಾರ ಪ್ರಕಟಿಸಿ ರೈತರನ್ನು ಸಂತೋಷಪಡಿಸಿದರೇ ದೇವರು ನಿಮಗೆ ಒಳ್ಳೆಯದು ಮಾಡುತ್ತಾನೆ. ಎಪ್ಪತ್ತೈದು ಅಥವಾ ಒಂದು ರೂಪಾಯಿಯನ್ನು ಜಾಸ್ತಿ ಮಾಡಿ, ಇದೇನು ದೊಡ್ಡ ಮೊತ್ತ ಅಲ್ಲ. After all, it is nothing.

ಶ್ರೀ ಬಿ.ಪಿಚ್. ಬನ್ನಿಕೋಡ್ : ಉದ್ದಿಮೆಗಳಲ್ಲಿ ತಯಾರು ಮಾಡತಕ್ಕ ಎಲ್ಲ ವಸ್ತುಗಳಿಗೆ ಎಲ್ಲ ರೀತಿಯ ಖರ್ಚು ವೆಚ್ಚ ಲೆಕ್ಕ ಹಾಕಿ, ಶೇಕಡ 25 ರಷ್ಟು ಲಾಭವನ್ನು ಸೇರಿಸುತ್ತಾರೆ. ಅದೇ ರೀತಿ ಖರ್ಚು ವೆಚ್ಚವನ್ನೆಲ್ಲ ಲೆಕ್ಕಹಾಕಿ, ಸರಿಯಾದ ಬೆಲೆಯನ್ನು ರೈತರಿಗೆ ಕೊಡಬೇಕು. ಈ ಸರ್ಕಾರ ರೈತನಿಗೆ ಶೋಷಣೆ ಮಾಡುತ್ತಿದೆ. ಉಳಿದ ಉತ್ಪಾದನೆಗಳಿಗೆ ಈ ಸರ್ಕಾರ ಯಾವ ರೀತಿ ಗಮನಹರಿಸಿದೆ, ಅದೇ ರೀತಿ ಹಾಲಿನ ಬಗ್ಗೆಯೂ ಕೂಡ ಗಮನಹರಿಸಬೇಕು. ಹಾಲನ್ನು ಕೊಡುವ ರೈತರಿಗೆ ಲಾಭ ಕೊಡುವ ಹಾಗೆ ಮಾಡಬೇಕು. ಈಗ ಇನ್ನು ಇಡೀ ರಾಜ್ಯದಲ್ಲಿ ದನಗಳು ಮೇಯಲು ಹುಲ್ಲುಗಾವಲುಗಳು ಇಲ್ಲ.

MR. SPEAKER : Repetition does not strengthen the case. ಅವರು ಇದನ್ನೆಲ್ಲಾ ಹೇಳಿದ್ದಾರೆ.

ಶ್ರೀ ಬಿ.ಪಿಚ್. ಬನ್ನಿಕೋಡ್ : ಎಲ್ಲಿ 10-20 ಎಕರೆ ಹುಲ್ಲುಗಾವಲು ಇದೆ, ಅದನ್ನು ಕೊಟ್ಟರೆ ಐಆರ್‌ಡಿಪಿ ಹಣದಲ್ಲಿ ಕೊಡುವಂತಹ ದನಕರುಗಳನ್ನು ಮೇಯಿಸಲು ಅನುಕೂಲವಾಗುತ್ತದೆ. ಅಲ್ಲಿ ಹೆಚ್ಚು ಜಮೀನು ಇದೆ. ಅದನ್ನು ಸಾಗುವಳಿಗೆ ಕೊಡಿ; ಆದರೆ ಕಡಿಮೆ ಇರುವುದನ್ನು ಸಾಗುವಳಿಗೆ ಕೊಡಬಾರದು. ದನಗಳು ಮೇಯಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 3 ರೂಪಾಯಿಗೆ ತೆಗೆದುಕೊಂಡು 6-7 ರೂಪಾಯಿಗೆ ವ್ಯಾಪಾರ ಮಾಡುತ್ತಿದ್ದಾರೆ. ಅಲ್ಲಿ ರೈತರು ಕಂಗಾಲಾಗಿದ್ದಾರೆ. ಗ್ರಾಹಕರು 6-7 ರೂಪಾಯಿಯನ್ನು ಕೊಟ್ಟು ತೆಗೆದುಕೊಳ್ಳಬೇಕಾಗಿದೆ. ದಕ್ಷಿಣ ಕನ್ನಡದಲ್ಲಿ ಹಾಲಿನ ಬವಣೆ ಬಹಳ ಇದೆ. ಇದನ್ನು ನೀಗಿಸಲು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ ಬೆಲೆ ಏರಿಕೆಯ ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಈ ಬಗ್ಗೆ ಪರಿಶೀಲನೆ ಮಾಡುತ್ತೇನೆಂದು ನಾನು ಹೇಳಿಲ್ಲ ಬೂಸ್ ಹಿಂಡಿ ಬೆಲೆ ಹೆಚ್ಚಿದ ರೀತಿ ರೈತರಿಗೂ ಕೂಡ ಹೆಚ್ಚಿನ ಬೆಲೆಯನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ಮಾನ್ಯ ರಂಗನಾಥ್‌ರವರು ಹೇಳಿದ ಪ್ರಕಾರ ರೈತರಿಗೂ ಕೊಡತಕ್ಕ ಬೆಲೆಗೂ ಹಾಲಿನ ಮಾರಾಟದ ಬೆಲೆಗೂ ಇರತಕ್ಕ ವ್ಯತ್ಯಾಸವನ್ನು ಪರಿಶೀಲನೆ ಮಾಡಿ ನಾವು ಸದ್ಯದಲ್ಲೇ ಕ್ರಮ ತೆಗೆದುಕೊಳ್ಳುತ್ತೇವೆ. ನಾವು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ, ಇದರ ಬಗ್ಗೆ ಸರ್ಕಾರ ತೀವ್ರವಾಗಿ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇವೆ. ಗ್ರಾಹಕರು ಮತ್ತು ಉತ್ಪಾದಕರು ಇವರುಗಳನ್ನು ಸಮನ್ವಯಗೊಳಿಸಿ ಈ ನಿರ್ಣಯವನ್ನು ಮಾಡಬೇಕು. ಎಂದು ಹೇಳಿ ತೀವ್ರವಾಗಿ ಆಲೋಚನೆ ಮಾಡಿ ಇನ್ನು ಒಂದೆರಡೂ ವಾರದಲ್ಲಿ ಕ್ರಮ ಕೈಗೊಳ್ಳುತ್ತೇವೆ. ಹಾಗೂ ಸೂಕ್ತ ಘೋಷಣೆಯನ್ನು ಮಾಡುತ್ತೇವೆ.